ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 33 ಬಿಎಲ್‌ಡಿ 2011
ಅಡಕ:

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:12-02-2020

**ಸುತ್ತೋಲೆ**

**ವಿಷಯ:** ಕೇಂದ್ರ ಸರ್ಕಾರದ ಧನಸಹಾಯ ಯೋಜನೆಯಡಿ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ ವತಿಯಿಂದ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ 57 ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಮಹಿಳಾ ಹಾಸ್ಟೆಲ್ ನಿರ್ಮಾಣ ಕಾಮಗಾರಿ ಬಾಕಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ: ಇಡಿ 55 ಹೆಚ್‌ಪಿಯು 2019 ದಿ: 11-02-2020.

----------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ಸರ್ಕಾರದ ಆದೇಶದಲ್ಲಿ ಕೇಂದ್ರ ಸರ್ಕಾರದ ಧನಸಹಾಯ ಯೋಜನೆಯಡಿ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ ವತಿಯಿಂದ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ 57 ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಮಹಿಳಾ ಹಾಸ್ಟೆಲ್ ನಿರ್ಮಾಣ ಕಾಮಗಾರಿ ಬಾಕಿ ಅನುದಾನವನ್ನು ರಾಜ್ಯ ವಲಯ ಲೆಕ್ಕಶೀರ್ಷಿಕೆ: 4202-02-104-1-01-139 ರಡಿ ಬಿಡುಗಡೆ ಮಾಡಲು ಅನುಮತಿ ನೀಡಿ ಆದೇಶಿಸಿರುತ್ತಾರೆ.

ಈ ದಿಸೆಯಲ್ಲಿ ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಕೇಂದ್ರ ಸರ್ಕಾರದ ಧನಸಹಾಯ ಯೋಜನೆಯಡಿ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ ವತಿಯಿಂದ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ 57 ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಮಹಿಳಾ ಹಾಸ್ಟೆಲ್ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಪತ್ರಕ್ಕೆ ಲಗತ್ತಿಸಿರುವ ನಮೂನೆಯಂತೆ ಮಾಹಿತಿಯನ್ನು ದಿ:15-02-2020 ಅಪರಾಹ್ನದೊಳಗೆ ಒದಗಿಸಿ ಅನುದಾನ ಬಿಡುಗಡೆ ಮಾಡುವ ಸಂಬಂಧ ನಿರ್ಮಾಣ ಏಜೆನ್ಸಿಯಿಂದ ಪಡೆದು ಪ್ರಸ್ತಾವನೆಯನ್ನು ಜರೂರು ಸಲ್ಲಿಸಬೇಕೆಂದು ಸೂಚಿಸಲಾಗಿದೆ.

dte.bld@gmail.com

**ನಿರ್ದೇಶಕರು.**

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001.

**ಪ್ರತಿ ಇವರಿಗೆ:**

**The Principal,**

1. Govt. Polytechnic, Gulbarga / Bellary / Bidar / Chitradurga / Belagaum / Bantwala / Gajendragada / Afzalpur / Kushalnagar / Chintamani / Channapatna / Soraba / Bilagi / Bagalakote / Bijapur / Chamarajanagara / Bagepalli / Hangal / Karwar / Kushtagi / K R Pet / Raichur / Tumkur / Joida / Gadag / Belur / Holenarasipura / Mulabagilu / Srirangapatna / Nagamangala / Mirle / Lingasugur / Ramanagar / Turuvekere / Koppal / Udupi.
2. DACG (Govt.) Polytechnic, Chikmagalur.
3. Govt. Polytechnic for Women, Mangalore / Shivmoga / Hubli / Hassan / Shiralakoppa / Karkala / Bangalore / Gulbarga / Ramanagar.
4. C.P.C. (Govt.) Polytechnic, Mysore.
5. D.R.R. (Govt.) Polytechnic, Davanagere.
6. G.R.I.C.P (Govt) Institute, Bangalore.

7. S J (Govt.) Polytechnic, Bangalore.
8. Smt. L V (Govt.) Polytechnic, Hassan.
9. Karnataka Govt. Polytechnic, Mangalore
10. Govt. Institute of Printing Technology, Bangalore.
11. Govt. S R C I B M Institute, Bangalore.
12. Govt. Institute of Textile Technology, Bangalore.
13. VISSJ Govt. Polytechnic, Bhadravathi.
14. Govt. School of Mines, KGF

Copy to:

E-Governance Officer, E-Governance Unit, Directorate of Technical Education, Bangalore – for information and upload this to DTE's Website.

(ರೂ.ಲಕ್ಷಗಳಲ್ಲಿ)

| ಸಂಸ್ಥೆಯ ಹೆಸರು | ಕಾಮಗಾರಿಯ ವಿವರ | ಏಜೆನ್ಸಿ | ಅಂದಾಜು ಮೊತ್ತ | ಟೆಂಡರ್ ಮೊತ್ತ | ಕೇಂದ್ರ ಸರ್ಕಾರದಿಂದ ಈವರೆಗೂ ಬಿಡುಗಡೆ ಯಾದ ಅನುದಾನ | ಕೇಂದ್ರ ಸರ್ಕಾರದಿಂದ ಬಿಡುಗಡೆ ಯಾಗ ಬೇಕಾದ ಅನುದಾನ | ಭೌತಿಕ ಪ್ರಗತಿ | ಕಟ್ಟಡ ಪೂರ್ಣ ಗೊಂಡಿದೆಯೆ | ಕಟ್ಟಡ ಹಸ್ತಾಂತರ ಗೊಂಡಿದೆಯೆ |
|---|---|---|---|---|---|---|---|---|---|

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001.

(ರೂ.ಲಕ್ಷಗಳಲ್ಲಿ)

| ಸಂಸ್ಥೆಯ ಹೆಸರು | ಕಾಮಗಾರಿಯ ವಿವರ | ಏಜೆನ್ಸಿ | ಅಂದಾಜು ಮೊತ್ತ | ಟೆಂಡರ್ ಮೊತ್ತ | ಕೇಂದ್ರ ಸರ್ಕಾರದಿಂದ ಈವರೆಗೂ ಬಿಡುಗಡೆ ಯಾದ ಅನುದಾನ | ಕೇಂದ್ರ ಸರ್ಕಾರದಿಂದ ಬಿಡುಗಡೆ ಯಾಗ ಬೇಕಾದ ಅನುದಾನ | ಭೌತಿಕ ಪ್ರಗತಿ | ಕಟ್ಟಡ ಪೂರ್ಣ ಗೊಂಡಿದೆಯೆ | ಕಟ್ಟಡ ಹಸ್ತಾಂತರ ಗೊಂಡಿದೆಯೆ | ಬ್ಯಾಂಕ್ ಖಾತೆಯಲ್ಲಿ ಲಭ್ಯವಿರುವ ಬಡ್ಡಿ ಮೊತ್ತ | ಬ್ಯಾಂಕ್ ಖಾತೆಯಲ್ಲಿ ಲಭ್ಯವಿರುವ ಬಡ್ಡಿ ಮೊತ್ತ ಏಜೆನ್ಸಿಗೆ ಬಿಡುಗಡೆ ಮಾಡಲಾಗಿ ದೆಯೇ? |
|---|---|---|---|---|---|---|---|---|---|---|---|

**ಕರಡು ನಿರ್ದೇಶಕರಿಂದ**
**ಅನುಮೋದಿಸಿದೆ.**

G. D. Ramachandrappa

**ನಿರ್ದೇಶಕರು**
**ತಾಂತ್ರಿಕ ಶಿಕ್ಷಣ ಇಲಾಖೆ**
**ಬೆಂಗಳೂರು-560001**

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೇಂದ್ರ ಸರ್ಕಾರದ ಧನಸಹಾಯ ಯೋಜನೆಯಡಿ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ ವತಿಯಿಂದ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ 57 ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಮಹಿಳಾ ಹಾಸ್ಟೆಲ್ ನಿರ್ಮಾಣ ಕಾಮಗಾರಿಗೆ ಬಾಕಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ: ಡಿಟಿಇ 33 ಬಿಎಲ್‌ಡಿ 2011 ದಿನಾಂಕ:13/02/2019 ಹಾಗೂ 01/10/2019

* * *

**ಪ್ರಸ್ತಾವನೆ:**

ಮೇಲೆ ಓದಲಾದ ದಿನಾಂಕ:13/02/2019ರ ಪ್ರಸ್ತಾವನೆಯಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರು, 2008-09ನೇ ಸಾಲಿಗೆ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ ವತಿಯಿಂದ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ 57 ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ತಲಾ ರೂ.1.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಮಹಿಳಾ ಹಾಸ್ಟೆಲ್ ನಿರ್ಮಾಣ ಮಾಡಲು ಅನುಮೋದನೆ ನೀಡಿದೆ. ಇವುಗಳಲ್ಲಿ 13 ಸರ್ಕಾರಿ ಪಾಲಿಟೆಕ್ನಿಕ್ ಹಾಸ್ಟೆಲ್‌ಗಳಿಗೆ ತಲಾ ರೂ.1.00 ಕೋಟಿಗಳಂತೆ ಅನುದಾನ ಬಿಡುಗಡೆಯಾಗಿದೆ, ಈ ಕಾಮಗಾರಿಗಳು ಪೂರ್ಣಗೊಂಡಿವೆ. 22 ಸರ್ಕಾರಿ ಪಾಲಿಟೆಕ್ನಿಕ್ ಹಾಸ್ಟೆಲ್‌ಗಳಿಗೆ ತಲಾ ರೂ.90.00 ಲಕ್ಷಗಳಂತೆ ಅನುದಾನ ಬಿಡುಗಡೆಯಾಗಿದೆ, ಈ ಕಾಮಗಾರಿಗಳು ಸಹ ಪೂರ್ಣಗೊಂಡಿದ್ದು ಬಾಕಿ ಬಿಡುಗಡೆ ಆಗದಿರುವುದರಿಂದ ಹಸ್ತಾಂತರವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಮುಂದುವರೆದು, 13 ಸರ್ಕಾರಿ ಪಾಲಿಟೆಕ್ನಿಕ್ ಹಾಸ್ಟೆಲ್‌ಗಳಿಗೆ ತಲಾ ರೂ.90.00 ಲಕ್ಷಗಳಂತೆ ಅನುದಾನ ಬಿಡುಗಡೆಯಾಗಿದ್ದು, ಈ ಕಾಮಗಾರಿಗಳ ಪ್ರಗತಿಯು ವಿವಿಧ ಹಂತದಲ್ಲಿವೆ. 9 ಸರ್ಕಾರಿ ಪಾಲಿಟೆಕ್ನಿಕ್ ಹಾಸ್ಟೆಲ್‌ಗಳಿಗೆ ತಲಾ ರೂ.70.00 ಲಕ್ಷಗಳಂತೆ ಅನುದಾನ ಬಿಡುಗಡೆಯಾಗಿದ್ದು, 8 ಕಾಮಗಾರಿಗಳು ಪೂರ್ಣಗೊಂಡಿದ್ದು, ಬಾಕಿ ಬಿಡುಗಡೆ ಆಗದಿರುವುದರಿಂದ ಹಸ್ತಾಂತರವಾಗಿರುವುದಿಲ್ಲ, ಇನ್ನೊಂದು ಕಾಮಗಾರಿ ಪ್ರಗತಿಯಲ್ಲಿದೆ. ಬಾಕಿ ಬಿಡುಗಡೆ ಸಂಬಂಧ ಕೇಂದ್ರ ಸರ್ಕಾರಕ್ಕೆ ಉಪಯೋಗತ ಪ್ರಮಾಣ ಪತ್ರ ಭೌತಿಕ ಪ್ರಗತಿ ವರದಿ ಬ್ಯಾಂಕ್ ಬಡ್ಡಿ ಪಟ್ಟಿ ಮತ್ತು ಛಾಯಚಿತ್ರಗಳನ್ನು ಕಳುಹಿಸಲಾಗಿದೆ. ಕೇಂದ್ರ ಸರ್ಕಾರವು ತನ್ನ ಪತ್ರ ಸಂಖ್ಯೆ ಎಫ್ ನಂ25/5/2017-KVY ದಿನಾಂಕ:17/08/2017ರಲ್ಲಿ ಪಾಲಿಟೆಕ್ನಿಕ್‌ಗಳ ಮೂಲಕ ಸಮುದಾಯದ ಅಭಿವೃದ್ಧಿ (ಸಿಡಿಟಿಪಿ) ಈ ಕಾಮಗಾರಿ/ಯೋಜನೆಗಳನ್ನು ಕೇಂದ್ರ ಕೌಶಲ್ಯ ಅಭಿವೃದ್ಧಿ ಇಲಾಖೆಗೆ ವರ್ಗಾಹಿಸಲಾಗಿದ್ದು, ಮತ್ತೊಮ್ಮೆ ಬಳಕೆ ಪ್ರಮಾಣ ಪತ್ರಗಳು ಮತ್ತು ಭೌತಿಕ ಪ್ರಗತಿಯ ವಿವರಗಳು ಕೋರಿದ್ದರು. ಅದರಂತೆ ಕಳುಹಿಸಿಕೊಡಲಾಗಿದೆ. ಈಗಾಗಲೇ ಸುಮಾರು ಹಾಸ್ಟೆಲ್‌ಗಳು ಪೂರ್ಣಗೊಂಡಿದ್ದು ಇವುಗಳನ್ನು ಹಸ್ತಾಂತರಗೊಳಿಸಿಕೊಳ್ಳದಿದ್ದರೆ ಶಿಥಿಲಾವಸ್ಥೆಗೆ ಬರುತ್ತಿವೆ ಎಂದು ತಿಳಿಸಿದ್ದ ಕೇಂದ್ರ ಸರ್ಕಾರದಿಂದ ಮಹಿಳಾ ಹಾಸ್ಟೆಲ್ ನಿರ್ಮಾಣಕ್ಕೆ ಬಾಕಿ ಬಿಡುಗಡೆಯಾಗಬೇಕಾದ ಮೊತ್ತ ರೂ.890 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ: 4202-02-104-1-01-139ರಡಿ ಲಭ್ಯವಿರುವ

ಅನುದಾನದಲ್ಲಿ ಭರಿಸಲು ಅನುಮತಿ ನೀಡುವಂತೆ ಕೋರಿರುತ್ತಾರೆ. ಈ ಕಾಮಗಾರಿಗಳಿಗೆ ಕೇಂದ್ರ ಸರ್ಕಾರದಿಂದ ಮುಂದಿನ ದಿನಗಳಲ್ಲಿ ಬಿಡುಗಡೆಯಾಗುವ ಅನುದಾನವನ್ನು ರಾಜ್ಯ ಸರ್ಕಾರದ ಅನುದಾನಕ್ಕೆ ಪರಿಗಣಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

ಮೇಲೆ ದಿನಾಂಕ:04/10/2019ರಲ್ಲಿ ಓದಲಾದ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರ ಪ್ರಸ್ತಾವನೆಯಲ್ಲಿ, ಕೇಂದ್ರ ಸರ್ಕಾರದ ಧನಸಹಾಯ ಯೋಜನೆಯಡಿ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ ವತಿಯಿಂದ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ 57 ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಮಹಿಳಾ ಹಾಸ್ಟೆಲ್ ನಿರ್ಮಾಣ ಕಾಮಗಾರಿಗಳಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಬಾಕಿ ಬಿಡುಗಡೆಗೆ ಕಾನೂನಾತ್ಮಕ ನೋಟಿಸ್‌ನ್ನು ನೀಡಿದ್ದು, ಬಡ್ಡಿ ಸಮೇತ ಬಾಕಿ ಅನುದಾನ ಬಿಡಗಡೆ ಮಾಡಲು ಗುತ್ತಿಗೆದಾರರು ಕೋರಿರುವುದಾಗಿ ತಿಳಿಸಿದ್ದು, ಬಾಕಿ ಅನುದಾನ ರೂ.890.00 ಲಕ್ಷಗಳನ್ನು 2019-20ನೇ ಸಾಲಿನ ಲೆಕ್ಕ ಶೀರ್ಷಿಕೆ:4202-02-104-1-01-139ರಡಿ ಲಭ್ಯವಿರುವ ಅನುದಾನದಲ್ಲಿ ಬಿಡುಗಡೆ ಮಾಡುವ ಸಂಬಂಧ ಸೂಕ್ತ ಆದೇಶವನ್ನು ನೀಡಬೇಕೆಂದು ಮತ್ತೊಮ್ಮೆ ಕೋರಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 55 ಹೆಚ್‌ಪಿಯು 2019 ಬೆಂಗಳೂರು, ದಿನಾಂಕ:11-02-2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕೇಂದ್ರ ಸರ್ಕಾರದ ಧನಸಹಾಯ ಯೋಜನೆಯಡಿ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ ವತಿಯಿಂದ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ 57 ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಮಹಿಳಾ ಹಾಸ್ಟೆಲ್ ನಿರ್ಮಾಣ ಕಾಮಗಾರಿಗಳಿಗೆ ಬಾಕಿ ಅನುದಾನ ರೂ.890.00 ಲಕ್ಷ (ಎಂಟುನೂರಾ ತೊಂಭತ್ತು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು 2019-20ನೇ ಸಾಲಿನ ಲೆಕ್ಕ ಶೀರ್ಷಿಕೆ:4202-02-104-1-01-139ರಡಿ ಲಭ್ಯವಿರುವ ಅನುದಾನದಿಂದ ಕೆಳಕಂಡ ಷರತ್ತುಗಳನ್ನು ಆಧಾರಿಸಿ ಬಿಡುಗಡೆ ಮಾಡಲು ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಅನುಮತಿ ನೀಡಿ ಆದೇಶಿಸಿದೆ.

**ಷರತ್ತುಗಳು**

1. ಕಟ್ಟಡ ಕಾಮಗಾರಿಗಳನ್ನು ಕೆ.ಟಿ.ಪಿ.ಪಿ ಅಧಿನಿಯಮ 1999 ಮತ್ತು ಅಧ್ಯಾದೇಶ-2000ರಲ್ಲಿ ತಿಳಿಸಿರುವ ಎಲ್ಲಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
2. ಈಗಾಗಲೇ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಅನುದಾನಕ್ಕೆ ಹಾಸ್ಟೆಲ್‌ವಾರು ಉಪಯೋಗತಾ ಪತ್ರಗಳನ್ನು ಮತ್ತೊಮ್ಮೆ ಕಳುಹಿಸಿ ಕೇಂದ್ರದಿಂದ ಬಿಡುಗಡೆಯಾಗ ಬೇಕಾಗಿರುವ ಬಾಕಿ ಅನುದಾನವನ್ನು ಆದ್ಯತೆ ಮೇರೆಗೆ ತರಿಸಿಕೊಂಡು ಸರಿದೂಗಿಸುವುದು
3. ಕಾಮಗಾರಿಗೆ ತಕ್ಕಂತೆ ಬಿಡುಗಡೆ ಮಾಡಬೇಕಾಗಿರುವ ಬಾಕಿಯನ್ನು ಮತ್ತೊಮ್ಮೆ ಖಚಿತವಾಗಿ ಲೆಕ್ಕ ಹಾಕಿ ಸಂಬಂಧಿಸಿದವರಿಗೆ ನಿಯಮಾನುಸಾರ ಬಿಡುಗಡೆ ಮಾಡತಕ್ಕದ್ದು
4. ಕೇಂದ್ರ ಸರ್ಕಾರವು ಅನುಮೋದಿಸಿದ ಮುಂದುವರೆದ ಕಾಮಗಾರಿಗಳನ್ನು ಮಾತ್ರ ಪರಿಗಣಿಸಿ ಅನುದಾನ ಬಿಡುಗಡೆ ಮಾಡುವುದು. ಯಾವುದೇ ಹೊಸ ಕಾಮಗಾರಿಗಳಿಗೆ ಈ ಅನುದಾನವನ್ನು ಬಿಡುಗಡೆ ಮಾಡತಕ್ಕದ್ದಲ್ಲ.

5. ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುವ ಕಾಮಗಾರಿಗಳನ್ನು ಆರ್ಥಿಕ ಮತ್ತು ಭೌತಿಕವಾಗಿ ಪೂರ್ಣಗೊಳಿಸಿ ಕಟ್ಟಡಗಳನ್ನು ಬಳಸಿಕೊಳ್ಳುವುದು.
6. ಕೇಂದ್ರ ಸರ್ಕಾರದ ಅನುದಾನವನ್ನು ನಿರೀಕ್ಷಿಸಿ ಕಟ್ಟಡಗಳ ಕಾಮಗಾರಿಗಳನ್ನು ಸ್ಥಗಿತಗೊಳಿಸಲು ಸಾಧ್ಯವಿರುವುದಿಲ್ಲ. ಆದ್ದರಿಂದ, ಆಯವ್ಯಯದಲ್ಲಿ ಕಟ್ಟಡ ಕಾಮಗಾರಿಗಳಿಗೆ ಒದಗಿಸಲಾಗಿರುವ ಅನುದಾನದಿಂದ ಪೂರ್ಣಗೊಳಿಸಲು ಕ್ರಮಕೈಗೊಳ್ಳುವಂತೆಯು ಹಾಗೂ ಈ ಸಂಬಂಧ ಕೇಂದ್ರ ಸರ್ಕಾರದಿಂದ ಬಾಕಿ ಅನುದಾನ ಬಿಡುಗಡೆಯಾದಂತೆ ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು.
7. ಈ ಉದ್ದೇಶಕ್ಕಾಗಿ ಯಾವುದೇ ಹೆಚ್ಚುವರಿ ಅನುದಾನವನ್ನು ಕೋರಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ ಆಇ 10 ವೆಚ್ಚ-8/2020 ದಿನಾಂಕ:03/02/2020ರಲ್ಲಿ ನೀಡಿದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ

(ಎಸ್.ಆರ್.ವರೆಕುಪ್ಪಿ)
ಆಂತರಿಕ ಆರ್ಥಿಕ ಸಲಹೆಗಾರರು ಮತ್ತು
ಸರ್ಕಾರದ ಉಪ ಕಾರ್ಯದರ್ಶಿ
ಉನ್ನತ ಶಿಕ್ಷಣ ಇಲಾಖೆ

ಇವರಿಗೆ.

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ (ಎ&ಇ), ಬೆಂಗಳೂರು.
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
3. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4. ಉಪ ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಬೆಂಗಳೂರು
5. ಉಪ ನಿರ್ದೇಶಕರು, ಖಜಾನೆ ಗಣಕ ಕೇಂದ್ರ, ನಂ.9, ಖನಿಜ ಭವನ, ಬೆಂಗಳೂರು.
6. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು (ಉನ್ನತ ಶಿಕ್ಷಣ) ಶಿಕ್ಷಣ ಇಲಾಖೆ ಅವರ ಆಪ್ತ ಕಾರ್ಯದರ್ಶಿಗಳು.
8. ಸರ್ಕಾರದ ಉಪ ಕಾರ್ಯದರ್ಶಿಗಳು ಮತ್ತು ಆಂತರಿಕ ಆರ್ಥಿಕ ಸಲಹೆಗಾರರ ಆಪ್ತ ಸಹಾಯಕರು (ಉನ್ನತ ಶಿಕ್ಷಣ)
9. ಹೆಚ್ಚುವರಿ ಪ್ರತಿಗಳು/ಕಡತದ ಪ್ರತಿಗಳು/ಶಾಖಾ ರಕ್ಷಾಕಡತ